**OS-341/2019 D.W.1**

ದಿನಾಂಕ 06.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>**ಪಾಟೀ ಸವಾಲು ಃ**</u> ವಾದಿಯ ಪರವಾಗಿ ಶ್ರೀ ಕೆ ಎಲ್ ಆರ್ ವಕೀಲರಿಂದ ಃ-

ನಾನು 7 ನೇ ತರಗತಿ ಪಾಸಾಗಿರುತ್ತೇನೆ. ನನ್ನ ಶಾಲಾ ದಾಖಲಾತಿ ಪ್ರಮಾಣಾಪತ್ರವನ್ನು ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ 7 ನೇ ತರಗತಿಯ ಅಂಕಪಟ್ಟಿಯನ್ನು ಬರೆಸಿ ತರಬಹುದು ಎಂದು ನುಡಿಯುತ್ತಾರೆ. ನನ್ನ 7 ನೇ ತರಗತಿಯ ಶಾಲಾ ದಾಖಲಾತಿ ರಿಜಿಸ್ಟರ್ ನಲ್ಲಿ ನನ್ನ ಹೆಸರು ಬಿ ವಿ ಹಾಲಯ್ಯ ಎಂದು ನಮೂದು ಇದೆ. ದಾವಾ ಆಸ್ತಿಯು ಮೂಲತಃ ಚನ್ನಬಸಯ್ಯ ಬಿನ್ ಮಹಾದೇವಯ್ಯ ರವರಿಗೆ ಸೇರಿದ್ದು. ಚನ್ನಬಸಯ್ಯ ಬಿನ್ ಮಹಾದೇವಯ್ಯ ವಾದಿಯ ತಂದೆ ಎಂದರೆ ಸರಿ. ದಾವಾ ಆಸ್ತಿಯು ಅವರಿಗೆ ಯಾವ ದಾಖಲೆಯ ಆಧಾರದ ಮೇಲೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ತೋರಿಸಿರುವ ವಂಶವೃಕ್ಷದಲ್ಲಿ ಚನ್ನಬಸಯ್ಯನಿಗೆ ಮೊದಲು ಯಾರಿಗೂ ಬಂದಿರಲಿಲ್ಲ ಎಂದರೆ ಸಾಕ್ಷಿ ಹಾಲಸಿದ್ದಯ್ಯ ಬಿನ್ ಪರಮೇಶ್ವರಯ್ಯ ರವರಿಗೆ ಬಂದಿತ್ತು ಎಂದು ನುಡಿಯುತ್ತಾರೆ. 1994 ರಿಂದ ಅವರ ಹೆಸರಿನಲ್ಲಿ ಖಾತೆ ಇತ್ತು. ಅವರು ಅಣ್ಣತಮ್ಮ ಎನ್ನುವ ಆಧಾರದ ಮೇಲೆ ಖಾತೆ ಬಂದಿತ್ತು. ಅದಕ್ಕೂ ಪೂರ್ವದಲ್ಲಿ ರುದ್ರಯ್ಯ ಬಿನ್ ಪ್ರಭಯ್ಯ ರವರ ಹೆಸರಿನಲ್ಲಿ ಖಾತೆ ಇತ್ತು. ಸದರಿಯವರಿಗೆ ಸದರಿ ಖಾತೆ ಯಾವ ದಾಖಲೆಯ ಆಧಾರದ ಮೇಲೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಅವರಿಗೆ ಸದರಿ ಖಾತೆ ಯಾವ ವರ್ಷದಲ್ಲಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅವರ ಹೆಸರಿಗೆ ದಾವಾ ಆಸ್ತಿ ಇದ್ದ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ. ಅಸಲು ದಾವಾ ಸಂಖ್ಯೆ 38/1994 ರ ದಾವೆಯ ವಿಚಾರ ನನಗೆ ಗೊತ್ತು. ಸದರಿ ದಾವೆಯಲ್ಲಿ ನನ್ನ ತಂದೆ ಮತ್ತು ನಾನು ಪಕ್ಷಗಾರರಾಗಿರಲಿಲ್ಲ. ನನ್ನ ಅಜ್ಜ ಸಹ ಪಕ್ಷಗಾರರಾಗಿ ಇರಲಿಲ್ಲ. ನನ್ನ ಅಣ್ಣತಮ್ಮಂದಿರು ಸಹ ಪಕ್ಷಗಾರರಿರಲಿಲ್ಲ. ಸದರಿ ದಾವೆಯ ದಾವಾ ಶೆಡ್ಯೂಲ್ ಅನ್ನು ನಾನು ನೋಡಿಲ್ಲ. ಅವುಗಳಲ್ಲಿ ಯಾವ ಯಾವ ಸರ್ವೇ ನಂಬರ್ ಸೇರಿದೆ ಎಂದು ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೇ ನಂಬರ್ 258/4 ಇತ್ತು ಎಂದು ನನಗೆ ಗೊತ್ತು. ವೇದಮೂರ್ತಿ ಮತ್ತು ಜಯಮ್ಮ, ಮಹಾದೇವಯ್ಯ, ಓಂಕಾರಯ್ಯ ಎಲ್ಲಾರು ಸೇರಿ ಪರಮೇಶ್ವರಯ್ಯ ವಿರುದ್ಧ ಹಾಕಿದ್ದರು. ಅಸಲು ದಾವೆ ಸಂಖ್ಯೆ 38/1994 ರಲ್ಲಿ ಸರ್ವೇ ನಂಬರ್ 258/4 ರ ಯಾವುದೇ ಆಸ್ತಿ ಸೇರ್ಪಡೆ

ಆಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿನ ವಕೀಲರು 1 ನೇ ಪ್ರತಿವಾದಿಯೊಂದಿಗೆ ಷರಿಕ್ ಆಗಿ ಮೋಸದಿಂದ ದಾವಾ ಶೆಡ್ಯೂಲ್ ನಲ್ಲಿ ಇಲ್ಲದ ಆಸ್ತಿಯನ್ನು ರಾಜೀ ಅರ್ಜಿಯಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸಿದ್ದಮ್ಮ ಕೋಂ ನಂಜಯ್ಯ ರವರಿಂದ ಚನ್ನಬಸಯ್ಯನಿಗೆ ದಾನವಾಗಿ ಬಂದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಚನ್ನಬಸಯ್ಯನ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗಾಗಲೀ ಹಾಗೂ ಚನ್ನಬಸಯ್ಯನ ಸಹೋದರ ಸಹೋದರಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಿಃ 30.01.1959 ರಂದು ದಾವಾ ಆಸ್ತಿಯು ದಾನದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ದಿನದಿಂದ ಅವರು ಜೀವಂತ ಇರುವವರೆಗೆ ಅವರ ಖಾತೆಯಲ್ಲಿಯೇ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆನಂತರ ರಾಜೀ ಅರ್ಜಿಯಲ್ಲಿ ನಮಗೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅವರು ತೀರಿಕೊಂಡ ನಂತರ ಅವರ ಹೆಂಡತಿಯಾದ ಜಯಮ್ಮನ ಖಾತೆಗೆ ಬಂದಿರುತ್ತದೆ ಎಂದರೆ ಸರಿ. ಚನ್ನಬಸಯ್ಯನ ವಂಶಸ್ಥರನ್ನು ಹೊರತುಪಡಿಸಿ ದಾವಾ ಆಸ್ತಿಯಲ್ಲಿ ಬೇರೆ ಯಾರಿಗೂ ಸಹ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಚನ್ನಬಸಯ್ಯನಿಗೆ ದಾನವಾಗಿ ಬಂದಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ದಾವಾ ಆಸ್ತಿ ನನ್ನ ಕೈ ಬಿಡುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾನ ಪತ್ರವನ್ನು ನನಗೆ ಮೋಸ ಮಾಡುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತಾರೆ. ಓಂಕಾರಯ್ಯನವರು ಬರೆದು ಸೃಷ್ಟಿ ಮಾಡಿರುತ್ತಾರೆ. ನನಗೆ ಸದರಿ ದಾನ ಪತ್ರ ನೀವು ಸಲಹೆ ಮಾಡಿದ ಮೇರೆಗೆ ತಿಳಿದು ಬಂದಿರುತ್ತದೆ. ವಾದಿಯು ಯಾವ ಯಾವ ದಾಖಲೆಗಳನ್ನು ಈ ದಾವೆಯಲ್ಲಿ ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿರುತ್ತೇನೆ. 2019 ರಲ್ಲಿ ನನಗೆ ಸದರಿ ದಾಖಲೆಗಳನ್ನು ಹಾಜರು ಮಾಡಿದ ಬಗ್ಗೆ ತಿಳಿದು ಬಂದಿತ್ತು. ನಾನು ಆ ದಾಖಲೆಗಳನ್ನು ನೋಡಿರುವುದಿಲ್ಲ. ನನಗೆ ಓದಲು ಸಹ ಬರುವುದಿಲ್ಲ. ಆ ಬಗ್ಗೆ ನನಗೆ ನನ್ನ ತಿಳುವಳಿಕೆಯ ಮೇರೆಗೆ ಗೊತ್ತಾಗಿರುತ್ತದೆ. ನನ್ನ ತಿಳುವಳಿಕೆಯ ಮೇರೆಗೆ ಗೊತ್ತಾದ ನಂತರ ಸದರಿ ದಾನಪತ್ರವನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಒಪ್ಪದ ಕಾರಣ ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾನ ಪತ್ರದ ವಿಚಾರ ಚನ್ನಬಸಯ್ಯನ ಹೆಸರಿಗೆ ಖಾತೆ ಬಂದಾಗಿನಿಂದಲೂ ನನಗೆ ಮತ್ತು ನನ್ನ ಕುಟುಂಬದವರೆಲ್ಲರಿಗೂ ಗೊತ್ತು ಎಂದರೆ ಸರಿಯಲ್ಲ.

**OS-341/2019  D.W.1**

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.